# ಡಾ. ರಾಜಶೇಖರ ನೀರಮಾನ್ವಿ ಕಥೆಗಳಲ್ಲಿ ಕಲ್ಯಾಣ ಕರ್ನಾಟಕದ ಗ್ರಾಮೀಣ ಜನ-ಜೀವನ.

**ಹನಮಂತಪ್ಪ**
ಸಂಶೋಧನಾ ವಿದ್ಯಾರ್ಥಿ
ಜ್ಞಾನಭಾರತಿ ಆವರಣ
ಬೆಂಗಳೂರು ವಿ.ವಿ.
ಬೆಂಗಳೂರು-560 056.

**Article Link: https://aksharasurya.com/2023/08/hanamantappa-banni/**

**ABSTRACT:**

ಡಾ. ರಾಜಶೇಖರ ನೀರಮಾನ್ವಿ ಪ್ರಕಟಿಸಿದ್ದು ಎರಡೇ ಕವನ ಸಂಕಲನ. ಆದರೆ ಅವರ ಕಥೆಗಳು ಕನ್ನಡ ಕಥಾ ಸಾಹಿತ್ಯ ಲೋಕದಲ್ಲಿ ವಿಶಿಷ್ಟ ಹೆಜ್ಜೆಗುರುತನ್ನು ಉಳಿಸಿವೆ. ನೀರಮಾನ್ವಿ ಕಥೆಗಳ ಕುರಿತಾದ ಈ ಲೇಖನವು ಸಾಮಾಜಿಕ, ಸಾಹಿತ್ಯಿಕ, ಪ್ರಾದೇಶಿಕ ಅಧ್ಯನವಾಗಿದ್ದು ವಸ್ತು ವಿಶ್ಲೇಷಣಾತ್ಮಕವಾಗಿದೆ. ಮಾತ್ರವಲ್ಲ ನೀರಮಾನ್ವಿಯವರ ಕಥೆಗಳಲ್ಲಿ ಬರುವ ಕಲ್ಯಾಣ ಕರ್ನಾಟಕದ ಪ್ರಾದೇಶಿಕ ಭಾಷೆಯ ಸೊಗಡನ್ನು ಗುರುತಿಸುವುದು. ಕಥೆಯಲ್ಲಿ ಬರುವ ತಾತ್ವಿಕತೆ ಮತ್ತು ಸಾತ್ವಿಕ ಸ್ವಭಾವವನ್ನು ಗುರುತಿಸುವುದು. ಕಥೆಯ ನಿರ್ವಹಣಾ ತಂತ್ರವನ್ನು ಗುರುತಿಸುವುದು. ಕಲ್ಯಾಣ ಕರ್ನಾಟಕದ ಪ್ರಾದೇಶಿಕ ನುಡಿಗಟ್ಟನ್ನು ಗುರುತಿಸಿ ಆ ಮೂಲಕ ಇಲ್ಲಿಯ ಜನಜೀವನವನ್ನು ಲೇಖಕರು ತಮ್ಮ ಕಥೆಯಲ್ಲಿ ಹೇಗೆ ಕಟ್ಟಿಕೊಟ್ಟಿದ್ದಾರೆ ಎಂಬುದನ್ನು ಕುರಿತ ಅಧ್ಯಯನವಾಗಿದೆ.

**KEYWORDS:** ವ್ಯಕ್ತಿನಿಷ್ಠ, ಏಕಾಕಾರ, ಪೀರಲದೇವರ, ಬಗೀಚದಾಗ, ಮಾಟೆ ಬಕ್ಕಣ, ಗಿರಕಿ.

ಮನರಂಜನೆಗಾಗಿ ಕಥೆ ಹೇಳುವ-ಕೇಳುವ ಪರಿಪಾಠ ಬಹುಕಾಲದಿಂದ ನಡೆದುಕೊಂಡು ಬಂದಿದೆ. ಇದಕ್ಕೆ ವಯಸ್ಸಿನ ಅಂತರವಿಲ್ಲ. ನಮಗೆ ಲಭ್ಯವಾಗಿರುವ ಕನ್ನಡ ಸಾಹಿತ್ಯದ ಮೊದಲ ಕಥಾಗುಚ್ಚ 'ವಡ್ಡಾರಾಧನೆ'. ಇದೇ ಕಲ್ಯಾಣ ಕರ್ನಾಟಕ ಭಾಗದ್ದು. ಈ ಕೃತಿಯ ಕಥೆಯಲ್ಲಿ ಬರುವ ಕಾರ್ತಿಕ ಋಷಿಯ ಕಥೆಯಲ್ಲಿ ಇದಕ್ಕೆ ಆಕಾರವಿರುವಂತಿದೆ. 'ಕೋಗಳಿಯನಾಳ್ವ ಕ್ರೌಂಚನೆಂಬರಸಂಗೆ ಕೊಟ್ಟರ್' ಈ 'ಕೋಗಳಿ' ಎಂಬ ನಾಡು ಈಗಿನ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ,

ಹೂವಿನ ಹಡಗಲಿ ಎಂಬ ತಾಲೂಕುಗಳನ್ನು ಒಳಗೊಂಡಿದ್ದ ಪ್ರದೇಶಕ್ಕೆ ಹಿಂದಿನ 'ಕೋಗಳಿ–500' ಎಂಬ ಹೆಸರಿದ್ದಿತು.[1] ಇದಾದ ನಂತರ ಕನ್ನಡ ಸಾಹಿತ್ಯದಲ್ಲಿ ಅನೇಕ ಗದ್ಯ ಕೃತಿಗಳು ಬಂದವು. ಉದಾ; ಧರ್ಮಾಮೃತ, ಮುದ್ರಾಮಂಜೂಷ, ರಾಮಾಶ್ವಮೇಧ ಮುಂತಾದವು.

ಭೂಮಿಯಲ್ಲಿ ಇಡಿಯಷ್ಟು ಬೀಜ ಹಾಕಿ ರಾಶಿಯಷ್ಟು ಪ್ರತಿಫಲ ಪಡೆಯುವ ಹಾಗೆ, ಡಾ. ರಾಜಶೇಖರ ನೀರಮಾನ್ವಿ ಪ್ರಕಟಿಸಿದ್ದು ಎರಡೇ ಕವನ ಸಂಕಲನ. ಆದರೆ ಈ ಕಥೆಗಳು ಕನ್ನಡ ಕಥಾ ಸಾಹಿತ್ಯ ಲೋಕದಲ್ಲಿ ವಿಶಿಷ್ಟ ಹೆಜ್ಜೆಗುರುತನ್ನು ಉಳಿಸಿವೆ. ಅದನ್ನೇ ಲೋಹಿಯಾ ಪ್ರಕಾಶನ, ಬಳ್ಳಾರಿ ಇವರು 12 ಕಥೆಗಳನ್ನೊಳಗೊಂಡ 'ಡಾ. ರಾಜಶೇಖರ ನೀರಮಾನ್ವಿ ಸಮಗ್ರ ಕಥೆಗಳು' ಎಂದು ಪ್ರಕಟಿಸಿದ್ದಾರೆ. ಇದಾದ ನಂತರ ಮತ್ತೇ ನೀರಮಾನ್ವಿಯವರು ನಿರವ ಮೌನ ತಾಳಿದ್ದರೂ ಅವರ ಕಥೆಗಳು ಮಾತ್ರ ಕನ್ನಡ ಸಾಹಿತ್ಯದಲ್ಲಿ ಸದ್ದು ಮಾಡುತ್ತಲೇ ಇವೆ. ಜಿ. ಎಚ್. ನಾಯಕ, ದೇವೇಂದ್ರ ಕುಮಾರ ಹಕಾರಿ, ಚೆನ್ನಬಸಪ್ಪ ಬೆಟ್ಟದೂರ, ಮೊಗಳ್ಳಿ ಗಣೇಶ್, ರಾಜೇಂದ್ರ ಚೆನ್ನಿ ಮುಂತಾದ ವಿಮರ್ಶಕರು ಇವರನ್ನು ಅತ್ಯುತ್ತಮ ಕತೆಗಾರರೆಂದು ಗುರುತಿಸಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ 1900 ರ ಹೊತ್ತಿಗೆ ಸಣ್ಣಕಥೆಗಳು ಗೋಚರವಾದವು. 1900ರಲ್ಲಿ ಪಂಜೇಮಂಗೇಶರಾಯರು ಸುವಾಸಿನಿ ಪತ್ರಿಕೆಯಲ್ಲಿ 'ನನ್ನ ಚಿಕ್ಕತಾಯಿ' ಪ್ರಕಟವಾಯಿತು.[2.] ಇದನ್ನು 'ಆಧುನಿಕ ಕನ್ನಡದ ಮೊದಲ ಕಥೆ' ಎಂದು ತೀರ್ಮಾನಿಸಲಾಯಿತು. ಪಂಜೇಯವರು ಮೊದಲ ಆಧುನಿಕ ಕತೆಗಾರರು ಎಂಬ ಮನ್ನಣೆಗೆ ಪಾತ್ರರಾದರು. 'ಕಥಾಂಜಲಿ' (1929) ಎಂಬ ಪತ್ರಿಕೆ ಕಥೆಗಳನ್ನು ಪ್ರಕಟಿಸಲೇಂದೇ ಹುಟ್ಟಿಕೊಂಡ ಪತ್ರಿಕೆ.

**ಕಲ್ಯಾಣ ಕರ್ನಾಟಕದ ಕಥಾ ಪರಂಪರೆ:** ಕಲ್ಯಾಣ ಕರ್ನಾಟಕದ ಕಥನ ಸಾಹಿತ್ಯ ಇತರ ಭಾಗಗಳಿಗಿಂತ ತಡವಾಗಿ ರಚನೆಯಾದರೂ, ಹೈದ್ರಬಾದ್ ನಿಜಾಮನ ಪ್ರಭುತ್ವಕ್ಕೆ ಮುಖಾಮುಖಿಯಾದುದರಿಂದ, ತುಂಬ ವಿಶಿಷ್ಟವಾದ ಉರ್ದು ಮಿಶ್ರಿತ ಹೊಸ ನುಡಿಗಟ್ಟೊಂದನ್ನು ಕಟ್ಟಿಕೊಂಡಿದ್ದರಿಂದ ಅದು ಕೂಡಲೇ ಕನ್ನಡದ ಓದುಗರನ್ನು ಆಕರ್ಷಿಸಿತು. ಹೈದ್ರಬಾದ ಕರ್ನಾಟಕದ ಕಥನ ಸಾಹಿತ್ಯದ ಲೇಖಕರು ಸಾಹಿತ್ಯೀಕವಾಗಿ ಕನ್ನಡದ ಮಾಸ್ತಿ–ಕಾರಂತ–ಕುವೆಂಪು ಅವರಂತೆ ಎತ್ತರವಾಗಿ ಬೆಳೆಯದಿದ್ದರೂ, ತಮ್ಮ ಭಾಷೆ–ಶೈಲಿ–ವಸ್ತುವಿನ ಮೂಲಕ ಸಹಜವಾಗಿಯೇ ಕನ್ನಡ ಕಥನ ಸಾಹಿತ್ಯಕ್ಕೆ ಹೊಸ ಆಯಾಮವನ್ನು ನೀಡಿದರು. ಹೀಗಾಗಿ ಹೈದ್ರಬಾದ್ ಕರ್ನಾಟಕದ ಕಥಾನಕಗಳು ತಮ್ಮ ಕುತೂಹಲದ ರಚನೆಯ ಮೂಲಕ ಕಡಿಮೆ ಅವಧಿಯಲ್ಲಿಯೇ ವಿಶಿಷ್ಟ ಸಾಹಿತ್ಯ ರೂಪಗಳಾಗಿ ಬೆಳೆದು ನಿಂತವು.

ಕಲ್ಯಾಣ ಕರ್ನಾಟಕದ ಪರಂಪರೆಯನ್ನು ಡಾ. ಬಸವರಾಜ ಸಬರದ ಅವರು ಮೂರು ಹಂತಗಳಲ್ಲಿ ಈ ಕೆಳಗಿನಂತೆ ಗುರುತಿಸುತ್ತಾರೆ.[3]

ಪ್ರಾರಂಭದ ಕಾಲಘಟ್ಟದಲ್ಲಿ ರಾಮಚಂದ್ರ, ವೆಂಕಟೇಶ್, ಆಶ್ರೀತ್, ವಿಠ್ಠಲರಾವ ಲಿಂಗಸೂರು, ರಾ. ಘ. ನರಸಿಂಹ ಕಠಾವಿ, ಕುಸುಮಾಕರ ದೇಸಾಯಿ, ಎಚ್. ವಿ. ಕುಲಕರ್ಣಿ, ಶ್ಯಾಮಪ್ರಸಾದ್ ಮುದಗಲ್, ಸಿದ್ಧಯ್ಯ ಪುರಾಣಿಕ, ಜಯತೀರ್ಥ ರಾಜಪುರೋಹಿತ, ದೇವೆಂದ್ರಕುಮಾರಿ ಹಕಾರಿ, ರಾಘವೇಂದ್ರ ಈ ಮೊದಲಾದವರು ಪ್ರಮುಖರಾಗಿದ್ದರು. ಇವರ ಕಥೆ–ಕಾದಂಬರಿಗಳ ಕಥಾವಸ್ತು ಸಾಮಾನ್ಯವಾಗಿ ಬ್ರಾಹ್ಮಣ ಸಮುದಾಯದ ಒಳ–ಹೊರಗನ್ನು ಹೇಳುವುದರ ಜತೆಗೆ, ನಿಜಾಮ್ ಸರಕಾರದಿಂದ ಆ ಸಮುದಾಯ ಎದುರಿಸುತ್ತಿದ್ದ ಆತಂಕದ ಕ್ಷಣಗಳನ್ನು ಅಭಿವ್ಯಕ್ತಿಸುತ್ತಿತ್ತು.[4]

ಎರಡನೇ ಘಟ್ಟ ರಾಯಚೂರಿನ ಶಾಂತರಸ, ಅಮರಾನಂದ ಬೆಟ್ಟದೂರ, ಸಿದ್ಧಯ್ಯ ಪುರಾಣಿಕ್ ಮಲ್ಲಿಕಾರ್ಜುನ ಮಸ್ಕಿ ಮೊದಲಾದವರಿಂದ ಪ್ರಾರಂಭವಾಗುತ್ತದೆ. ನಂತರದಲ್ಲಿ ರಾಜಶೇಖರ ನೀರಮಾನ್ವಿ ಸೇರಿಕೊಳ್ಳುತ್ತಾರೆ.[5]

ಮೂರನೇ ಘಟ್ಟ ಕುಂವಿ. ಅಮರೇಶ ನುಗಡೋಣಿ (ಸಂ. ಬಿಸಿಲ ಹನಿಗಳು), ಪಂಪಯ್ಯ ಶೆಟ್ಟಿ ಮತ್ತು ಕೆ. ಎಂ. ಪುರದ (ಸಂ. ಕಥಾ ಕವನ), ಮಹಾಂತೇಶ ನವಲಕಲ್ (ಸಂ. ಒರೆಗಲ್ಲು) ಮಹಾಂತೇಶ ಮಸ್ಕಿ (ಒಡಲುರಿ), ಎಸ್. ಶರಣೇಗೌಡ (ಸಂ. ಕಾಗದದೋಣಿ ಮತ್ತು ಇತರ ಕಥೆಗಳು), ಸಿದ್ಧರಾಮ ಹೊನ್ಕಲ್, ಕ್ಷಿತಿಜ ಬೀದರ ಮುಂತಾದವರು.[6]

ಹೊಸ ತಲೆಮಾರಿನ ಪ್ರಮುಖ ಕಥೆಗಾರರೆಂದರೆ ದಾದಾಫಿರ್ ಜೈಮನ್, ನಾಗರಾಜಕೋರಿ, ಕಪಿಲ ಪಿ. ಹುಮ್ನಬಾದೆ, ಹನಮಂತ ಹಾಲಗೇರಿ, ಇಸ್ಮಾಯಿಲ್ ತಳಕಲ್, ಮುದಿರಾಜ ಬಾಣದ, ಅನಿಲ ಗುನ್ನಾಪುರ ಮುಂತಾದವರು.

**ನೀರಮಾನ್ವಿಯವರ ಕಥಾ ಲೋಕದಲ್ಲಿ ಹಳ್ಳಿ ಜನ–ಜೀವನ:**

ಇವರ ಕಥೆಗಳಲ್ಲಿ ಕೌಟುಂಬಿಕ ಕಥೆಯ ಜೊತೆಗೆ ಮನುಷ್ಯ ಪ್ರಪಂಚದಂತೆ ಕಾಡು–ಮೇಡು, ಪ್ರಾಣಿ–ಪಕ್ಷಿಗಳ ಪ್ರಪಂಚವೂ ಏಕಕಾಲದಲ್ಲಿ ರೂಪು ಪಡೆದುಕೊಳ್ಳುತ್ತಾ ಹೋಗುತ್ತದೆ. ಇದರಿಂದ ಇವರ ಬರವಣಿಗೆಯಲ್ಲಿ ಜೀವಂತಿ–ಕೆಯ ಗಾಂಭೀರ್ಯತೆ ಬಂದು ಸೇರಿಕೊಳ್ಳುತ್ತದೆ. ಇಲ್ಲಿನ ಕಥೆಗಳಲ್ಲಿ ವಾಸ್ತವದ ನೆಲೆಗಟ್ಟಿನ ಬದುಕನ್ನು ಕಟ್ಟಿಕೊಡುತ್ತಲೇ ಗ್ರಾಮ ಸಮಾಜದ ಬಡತನವನ್ನು ಪ್ರಮುಖ ವಸ್ತುವಾಗಿ ದುಡಿಸಿಕೊಂಡಿದ್ದಾರೆ. ಉದಾ; ತಿಮ್ಮನ ಪಾತ್ರ. ಒಂದು ಕಡೆ ತಿಮ್ಮ ತಾನು ದುಡಿದು ಮನೆಯನ್ನು ನೋಡಿಕೊಳ್ಳಬೇಕು, ಇನ್ನೊಂದು ಕಡೆ ತನ್ನ ಜೀವನವನ್ನು

ನೋಡಿಕೊಳ್ಳುವುದರೊಂದಿಗೆ ತಂಗಿಯ ಜೀವನವನ್ನೂ ಹಸನು ಮಾಡಬೇಕಾದ ಅನಿವಾರ್ಯತೆಗೊಳಗಾಗುತ್ತಾನೆ. ಇದನ್ನೇ ಬಡತನದ ಬರೆ ಎನ್ನುವುದು. ಕೆಲವೊಂದು ಪಾತ್ರಗಳು ಅವರು ಬದುಕಿದ ಬದುಕಿನಿಂದ ಪ್ರಭಾವಿತಗೊಂಡವುಗಳು ಆಗಿವೆ. ಆ ಪಾತ್ರಗಳು ನಿಜ ಜೀವನದಲ್ಲಿ ಬಂದು ಲೇಖಕನನ್ನು ವಿಚಾರಣೆಗೆ ಒಳಪಡಿಸುತ್ತವೆ, ದಂಡಿಸುತ್ತವೆ, ತಮಗೆ ತಾವೇ ಸಮಾಧಾನಗೊಳ್ಳುತ್ತವೆ. ಅಂ–ದರೆ ಈ ಸಂಕಲನದ ಎಲ್ಲ ಕಥೆಗಳಲ್ಲಿ ಅಡಗಿರುವ ಕಥನ ಗುಣವು ಲೇಖಕರು ಆಯ್ದುಕೊಂಡ ವಸ್ತು ವಿಷಯಕ್ಕೆ ಸಂಪರ್ಕಕೊಂಡಿಯಾಗಿ ಕೆಲಸ ಮಾಡಿದೆ. ಇಲ್ಲಿನ ಎಲ್ಲ ಅನುಭವಗಳು ರೊಮಾಂಚನಗೊಳ್ಳುವಂತೆ ಚಿತ್ರಿತವಾಗಿವೆ. ಇವರ ಕಥನ ಶೈಲಿಯ ವಿಶಿಷ್ಟತೆಯನ್ನು 'ಸಮಗ್ರ ಕಥೆಗಳು' ಕೃತಿಯ ಮುನ್ನುಡಿಯಲ್ಲಿ ರಾಜೇಂದ್ರ ಚೆನ್ನಿ ಈ ರೀತಿ ಗುರುತಿಸುತ್ತಾರೆ. "ನವ್ಯ ಕಾಲದ ಸಣ್ಣಕಥೆಯ ಪ್ರಭಾವಿ ಪರಂಪರೆಯ ಮಧ್ಯೆ ರಾಜಶೇಖರ ನೀರಮಾನ್ವಿಯವರು ತಮ್ಮ ಸ್ವಂತಿಕೆಯನ್ನು ಹುಡುಕಿಕೊಂಡದ್ದು ಮಾತ್ರವಲ್ಲ, ಸಣ್ಣಕಥೆಯ ಪ್ರಕಾರಕ್ಕೆ ಒಂದು ಭಿನ್ನ ನೆಲೆಯನ್ನು ತಂದುಕೊಟ್ಟದ್ದನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ. ಇದು ಸಶಕ್ತವಾದ ತನಗೆ ತಾನು ಪ್ರಾಮಾಣಿಕವಾದ ಪ್ರತಿಭೆಯಿಂದ ಮಾತ್ರ ಸಾಧ್ಯವಾಗುವಂಥದ್ದು. ಅವರ ಮೊದಲ ಕಥೆಯಾದ 'ವೃತ್ತ'ವನ್ನೆ ನೋಡಿ, ರಾಯಚೂರು ಪ್ರಾಂತ್ಯದ, ಪ್ರಾದೇಶಿಕ ನುಡಿಗಟ್ಟು, ಗೌಡಿಕೆ–ಜಮೀನ್ದಾರಿಗಳ ಜೀವನ ಪದ್ಧತಿ ಇವು ಅದೆಷ್ಟು ಗಟ್ಟಿಯಾಗಿ, ಸಹಜವಾಗಿ, ವಾಸ್ತವವಾಗಿ ಇಲ್ಲಿ ಬರುತ್ತವೆಂದರೆ; ನಗರ ಕೇಂದ್ರಿತ ವ್ಯಕ್ತಿನಿಷ್ಠ ಸಂವೇದನೆಯ ನವ್ಯಕತೆಗಳು ಹೊರಬಂದ ಹತ್ತುವರ್ಷಗಳಲ್ಲಿ ನೀರಮಾನ್ವಿ ಇದನ್ನು ಬರೆದರು ಎಂದು ಆಶ್ಚರ್ಯವೆನಿಸುತ್ತದೆ."[7]

ಇವರ ಕಥೆಗಳು ಸಾಮಾಜಿಕ ಸಂಬಂಧ, ಕೌಟುಂಬಿಕ ಬಿಕ್ಕಟ್ಟು, ಹಸಿವಿನ ಆದ್ರತೆ, ಶ್ರೀಮಂತರ ನಿಷ್ಕರುಣೆಯನ್ನು ಎಳೆಎಳೆಯಾಗಿ ಬಿಚ್ಚಿಡುತ್ತವೆ. ಇದರಲ್ಲಿ ಪ್ರತಿಯೊಂದು ಕಥೆಯ ಘಟನೆಯೂ ಲೇಖಕರು ಸಮಾಜದೊಂದಿಗೆ ಹೊಂದಿರುವ ಸಂಬಂಧ, ಅವುಗಳೊಂದಿಗಿನ ಸ್ವಾನುಭವದ ಅಂಶಗಳನ್ನು ಅಭಿವ್ಯಕ್ತಿಸುತ್ತದೆ. ಈ ಸಂಕಲನದ ಹಲವು ಕಥೆಗಳಲ್ಲಿ, ಪ್ರಾಣಿ–ಪಕ್ಷಿಗಳೊಂದಿಗಿನ ಸಂಬಂಧಗಳು, ತೋಟದಲ್ಲಿ ಕೆಲಸ ಮಾಡುತ್ತಿದ್ದ ಆಳುಗಳು, ಮನುಷ್ಯ ಸಂಬಂಧದಲ್ಲಿ ಎದುರಾದ ವಿಶಿಷ್ಟ ವ್ಯಕ್ತಿ ಮತ್ತು ಘಟನೆಗಳು, ಅನಕ್ಷರಸ್ಥ ಜನಸಮುದಾಯದ ಮೌಢ್ಯತೆ ಮತ್ತು ಪ್ರಾಮಾಣಿಕತೆ, ಅಸಾಧಾರಣ ಸನ್ನಿವೇಶಗಳಲ್ಲಿ ಅಪರೂಪವಾಗಿ ವರ್ತಿಸುವ ನಾಯಿಯಂಥ ಪ್ರಾಣಿಗಳ ಉಪಸ್ಥಿತಿ, ಅಪಾಯ ಎದುರಾಗುವ ಸಂದರ್ಭದಲ್ಲಿ ತಮ್ಮನ್ನು ರಕ್ಷಣೆ ಮಾಡಿದ ತಂತ್ರಗಾರಿಕೆ ಇಂಥ ಹತ್ತು ಹಲವು ವಿಚಾರಗಳು ಸುರುಳಿ

ಸುರುಳಿಯಾಗಿ ಬಿಚ್ಚಿಕೊಳ್ಳುತ್ತಾ ಹೋಗುತ್ತವೆ.

ಈ ಸಮಗ್ರ ಕಥೆಗಳು ಗ್ರಾಮದ ಒಳಗಿನ ವಿದ್ಯಮಾನಗಳನ್ನು ಸೂಕ್ಷ್ಮವಾಗಿ, ಸಾಂದ್ರವಾಗಿ ನಿರೂಪಿಸುತ್ತಲೇ ಅವುಗಳನ್ನು ಮೀರಿದ ಸಾಮಾಜಿಕ ಲೋಕವನ್ನು, ಅದರೆಲ್ಲ ಚಲನಶೀಲತೆಯನ್ನು ಕಾಣಿಸುವುದು ಎಲ್ಲ ಕಥೆಗಳ ಸಾಮಾನ್ಯ ಲಕ್ಷಣವೆನ್ನಬಹುದು. ಸ್ಥಳೀಯ ಭಾಷೆ–ಸಂಸ್ಕೃತಿ–ಪರಿಸರಗಳಲ್ಲಿ ಆಳವಾಗಿ ಬೇರು ಬಿಟ್ಟ ಆ ಮೂಲದ್ರವ್ಯದಿಂದಲೇ ಇತಿಹಾಸದ ನಡೆಗಳನ್ನು ಅವಲೋಕಿಸುವುದು ಈ ಲೇಖಕರ ಮುಖ್ಯ ಗುಣ. ಎಲ್ಲ ಕಥೆಗಳು ಕಾಲಬದ್ಧವಾಗಿದ್ದೂ ಕಾಲಾತೀತ ನೆಲೆಗಳನ್ನು ಸ್ಪರ್ಶಿಸುವ ಮಹಾತ್ವಾಕಾಂಕ್ಷೆಯನ್ನು ಪ್ರಕಟಿಸುತ್ತವೆ. ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡೆ ಅಲ್ಲಮ ಪ್ರಭು ಬೆಟ್ಟದೂರ ಹೀಗೆ ಹೇಳಿರಬಹುದು. “ನವ್ಯ ಕಾಲಘಟ್ಟದಲ್ಲಿ ಬರೆದವರು ಅಪ್ಪ, ಅಜ್ಜನ ಅಧಿಕಾರಿ ಪ್ರಶ್ನಿಸಿತೊಡಗಿದರು. ನವ್ಯದ ಕೊನೆಯ ಘಟ್ಟದಲ್ಲಿ ಬರೆಯತೊಡಗಿದ ನೀರಮಾನ್ವಿಯವರು ನವ್ಯದ ಕೆಲ ವಿಚಾರ ಸ್ವೀಕರಿಸಿದರೂ ನವ್ಯಕ್ಕಿಂತ ಭಿನ್ನವಾಗಿಯೇ ಬರೆದಿದ್ದಾರೆ.”[8]

ಒಂದು ಗ್ರಾಮ ಸಮುದಾಯಗಳಿಗೆ ಆಧುನಿಕತೆ ಪ್ರವೇಶಿಸುವ ಪರಿ ನೀರಮಾನ್ವಿಯವರ ಪ್ರಧಾನ ಆಶಯ. ಉದಾ: ವೃತ್ತ ಕತೆಯಲ್ಲಿ ಬರುವ ಗೌಡಕಿ ತಲೆತಲಾಂತರದಿಂದ ಬಂದಿದ್ದರೂ ಅದನ್ನು ದಿಕ್ಕರಿಸುವ ಸ್ವವಿಮರ್ಶೆ ಗೌಡನಲ್ಲಿ ಬಂದಿರುವುದೇ ಆಧುನಿಕತೆಯ ಪ್ರವೇಶ. “ಈ ಜನ ಏಕೆ ನನಗೆ ಇಷ್ಟು ಮರ್ಯಾದೆ ಕೊಡಬೇಕು? ನಾನೇನು ಅಂತಹ ದೊಡ್ಡ ಉಪಕಾರದ ಹೊರೆ ಹೊರಸಿದ್ದೇನೆ ಇವರ ಮೇಲೆ? ಹಿಂದೆ ನಿಜಾಮನ ರಾಜ್ಯದಲ್ಲಿ ಹೊಡೆದು ಬಡಿದು, ಹಿಂಸೆ ಕೊಡುವ ರಜಾಕಾರರಿಗೂ ಈ ರೀತಿ ಸಲಾಮು ಹಾಕುತ್ತಿದ್ದರು. ಈಗ ನನಗೂ ಹಾಕುತ್ತಿದ್ದಾರೆ. ಎಲ್ಲರಿಗೂ ಒಂದೇ ಮರ್ಯಾದೆ. ಒಟ್ಟಿನಲ್ಲಿ ಈ ಜನರಿಗೆ ಸಲಾಮು ಹಾಕಲು ಒಂದು ವ್ಯಕ್ತಿ ಬೇಕು, ಅಷ್ಟೆ. ಆ ವ್ಯಕ್ತಿ ಒಳ್ಳೆಯವನಿರಲಿ, ಕೆಟ್ಟವನಿರಲಿ ಅದು ಮುಖ್ಯವಲ್ಲ. ಆಗ ಅವರ ರಾಜ್ಯವಿತ್ತೆಂದು ಅವರಿಗೆ ನಮಸ್ಕರಿಸುತ್ತಿದ್ದರು. ಈಗ ಪ್ರಜಾರಾಜ್ಯದಲ್ಲಿ ಊರಿಗೆ ದೊಡ್ಡವನೆನಿಸಿಕೊಂಡ ನನಗೆ ನಮಸ್ಕರಿಸುತ್ತಿದ್ದಾರೆ.”[9] ಈ ರೀತಿಯ ಸ್ವವಿಮರ್ಶೆಯ ಸೂಕ್ಷ್ಮತೆಯನ್ನು ವಿವರಿಸುವಲ್ಲಿ ನೀರಮಾನ್ವಿಯವರು ಸಫಲರಾಗಿದ್ದಾರೆ. ಬರಹವು ಕೇವಲ ಕಾಲ್ಪನಿಕ ವಿವರಣೆಯ ಒಣ ದಾಖಲೆಯಾಗದೆ ರಕ್ತಮಾಂಸ ತುಂಬಿದ ಮನುಷ್ಯನ ಕಥನವಾಗುವುದು ಹೀಗೆ.

ಈ ಭಾಗದ ಹಳ್ಳಿ ಸೊಗಡನ್ನು, ಆಧುನಿಕತೆಯ ಸಂಘರ್ಷವನ್ನು ದಾಖಲಿಸುವಾಗ ಏಕಾಕಾರದ ಮಾದರಿಗಳನ್ನು ಸೃಷ್ಟಿಸದೆ, ಒಂದು ಕುಟುಂಬ, ಗ್ರಾಮದ ಮತ್ತು ದೇಶದ ಒಳಗೇ ಕಂಡುಬರುವ ಅಂತರ್ ವಿರೋಧಗಳನ್ನೂ, ಇಕ್ಕಟ್ಟು–

ಬಿಕ್ಕಟ್ಟುಗಳನ್ನು ಗಮನಿಸಿರುವಲ್ಲಿ ಇವರ ಕಥೆಗಳು ಯಶಸ್ವಿಯಾಗಿವೆ. ಉದಾ; ದುರಸ್ಥಿ ಕಥೆಯಲ್ಲಿ ತಿಮ್ಮನ ಮನೆಯಲ್ಲಿ ಬರುವ ಭಿನ್ನ-ಭಿನ್ನ ವಿಚಾರಧಾರೆಗಳ, ಮನಸ್ಥಿತಿಗಳ ವ್ಯಕ್ತಿಗಳನ್ನು ಕಾಣಬಹುದು. ಸ್ಥೂಲವಾಗಿ ಕಾಣಿಸಿಕೊಳ್ಳುವ ಆಂತರಿಕ ಸಂಘರ್ಷಗಳ ಸೂಕ್ಷ್ಮ ಸ್ವರೂಪವೊಂದು ತಿಮ್ಮನ ಕುಟುಂಬದೊಳಗೇ ಅಂತಸ್ಥವಾಗಿರುವುದನ್ನು ಈ ಕಥೆ ಸೂಕ್ಷ್ಮವಾಗಿ ಗಮನಿಸಿದೆ. ಇವರು ಸಾಧಿಸಿಕೊಂಡಿರುವ ಬಹುಮುಖತೆ, ಸಂಕೀರ್ಣತೆ ಮತ್ತು ಒಪ್ಪಂದಗಳನ್ನು ಕಂಡೇ ಡಾ. ಬಸವರಾಜ ಸಬರದ ಹೀಗೆ ಹೇಳುತ್ತಾರೆ. "ನವ್ಯದ ಸಂದರ್ಭದಲ್ಲಿಯ ಕಥೆಗಳನ್ನು ಬರೆಯಲು ಪ್ರಾರಂಭಿಸಿದ ರಾಜಶೇಖರ ನೀರಮಾನ್ವಿ ಬಹು ಮಹತ್ವದ ಕಥೆಗಾರ. ಇವರು ಅರವತ್ತರ ದಶಕದಲ್ಲೇ ಕಥೆ ಬರೆಯಲು ಪ್ರಾರಂಭಿಸಿದವರು. ಆ ಸಂದರ್ಭದಲ್ಲಿಯೇ ಇವರ ಕಥೆ ಇಂಗ್ಲೀಷ್ ಭಾಷೆಗೆ ಅನುವಾದಗೊಂಡು, ನ್ಯಾಷನಲ್ ಟ್ರಸ್ಟದಿಂದ ಪ್ರಕಟವಾಗಿದೆ. 1978 ರಲ್ಲಿ ಪ್ರಕಟವಾದ ಇವರ "ಹಂಗಿನರಮನೆಯ ಹೊರಗೆ" ಕಥಾಸಂಕಲನ ಕನ್ನಡದಲ್ಲಿಯೇ ಶ್ರೇಷ್ಠವಾದ ಕೃತಿ"[10] ಎಂದಿದ್ದಾರೆ.

ಇವರ ಕಥೆಗಳಲ್ಲಿ ಗ್ರಾಮಗಳ ನಡುವಣ ವೈಷಮ್ಯ, ಜಾತಿ-ಜಾತಿಗಳ ಜೊತೆಯಲ್ಲಿಯೇ ಹಿಂದೂಗಳು ಮತ್ತು ಮುಸ್ಲಿಂರು ಸೌಹಾರ್ದಯುತ ಸಹಬಾಳ್ವೆ ನಡೆಸುವ ಚಿತ್ರಗಳೂ ಸಾಕಷ್ಟಿವೆ. ಇದೆ ಕಲ್ಯಾಣ ಕರ್ನಾಟಕದ ಸಾಮರಸ್ಯದ ವೈಶಿಷ್ಟ. ಉದಾ; 'ಭೂತ' ಕಥೆಯಲ್ಲಿ ದೆವ್ವ ಬಂದವರನ್ನು ದೆವ್ವ ಬಿಡಿಸುವುದು ಮುಸ್ಲಿಂ ದೇವರಾದ 'ಪೀರಲದೇವರ' ಹಬ್ಬದಲ್ಲಿ. ಹಾಗೇ 'ವೃತ್ತ' ಕಥೆಯಲ್ಲಿ ಬರುವ ಒಂದು ಸನ್ನಿವೇಶವನ್ನೂ ಗಮನಿಸಬಹುದು.

'ಸಲಾಂ ಪಟೇಲ್ ಸಾಬ್.'

'ಏನು ಹಬೀಬಿ ಬಂದಿದ್ದಿ?' ಹುಸೇನಿಯ ಮಗ ಹಬೀಬ ಬಂದಿದ್ದ.

'ಏನು ಇಲ್ಲ ಪಟೇಲ್ ಸಾಬ್, ನಂ ಬಗೀಚದಾಗ ಪುಂಡೆಪಲ್ಲೆ ಒಣಗಾಕ ಹತ್ತೈತಿ, ಒಂದಿಷ್ಟು ಮಾಟೆ ಬಕ್ಕಣ ಬೇಕಾಗಿತ್ತು.'

'ಯಂಕನ್ನ ಕೇಳು ನಮ್ಮ ಬಾಳೆ ಗಿಡಕ್ಕೆ ನೀರು ಕಟ್ಟಬೇಕಂತಿದ್ದ, ನೀರು ಕಟ್ಟಿದ್ದರೆ ಒಯ್ಯಿ. ಈ ಸರ್ತಿ ಪೀರಲಬ್ಬಕ್ಕ ದೇವ್ರು ಕುಂದ್ರಸಾಕ ಈಗ್ಲಿಂದ ತಯಾರಿ ನಡದೈತಂತ?'

'ಕುಛ್ ನ್ಯೆ ಸಾಭ್. ನನಗೂ ಅಷ್ಟು ಅನುಭವ ಇಲ್ಲ ಅದರಾಗ, ಅದಕ್ಕ ಕಪಗಲ್ ಮುಲ್ಲಾಸಬ್ರ ಹಿರೇತನದಾಗ ಈಗ್ಲಿಂದಾ ಒಂದಿಷ್ಟು ಕಲಕೋಬೇಕಂತ ಓಡಾಡ್ತಿದ್ದೀನಿ.'

'ಏನನ್ನ ಮಾಡ್ರಿ, ಆದರೆ ನಿಮ್ಮಪ್ಪ ಹುಸೇನಿ ಇದ್ದಾಗಿನ ಜರ್ಬು ಒಂದು ಸೊಲ್ಪೂ ಕಡಿಮೆಯಾಗಬಾರದು. ನಮ್ಮೂರ ಪೀರಲಬ್ಬಕ್ಕ ನೂರಾರು ಮಂದಿ ದೆವ್ವ ಬಿಡಿಸಿಗೊಳ್ಳಾಕ ಬರ್ತಾರ, ಹುಸೇನಸಾಬ ಸತ್ತು ಕಡ್ಮಿ ಆಯ್ತು ಅನಿಸಿಗೋಬಾರದು.'

'ಎಲ್ಲೀತನಕ ನೀವು ದೊಡ್ಡವರು ಈ ಊರಾಗ ಇರ್ತಿರೋ ಅಲ್ಲೀ ತನಕ ನಮ್ಮೂರ ನೀರಮಾನ್ವಿ ಹೆಸರು ಎಲ್ಲರ ಬಾಯಾಗೂ ಇರತೈತೆ ಪಟೇಲ್ ಸಾಬ್.

ಈ ಇವರಿಬ್ಬರ ನಡುವಿನ ಸಂಭಾಷಣೆಯೇ ಪರಸ್ಪರ ಸೌಹಾರ್ದಯುತ ಜೀವನಕ್ಕೆ ಸಾಕ್ಷಿ. ಈ ಹಬ್ಬ ಇಡೀ ಕಲ್ಯಾಣ ಕರ್ನಾಟಕದ ಕೋಮು ಸಾಮರಸ್ಯಕ್ಕೆ ಉತ್ತಮ ಉದಾಹರಣೆಯೂ ಹೌದು.

ನೀರಮಾನ್ವಿಯವರು ಮೌಢ್ಯವನ್ನು ಹೇಳುವಾಗ 'ಭೂತ' ಕಥೆಯಲ್ಲಿ ರಮೇಶನ ಕುಟುಂಬದ ಭೂತಕಾಲದ ಇತಿಹಾಸವನ್ನು ಹೇಳುವುದು, ಮತ್ತು ರಮೇಶನಿಗೆ 'ಭೂತ' (ಗಾಳಿ) ಹಿಡಿಯುವುದು ಎರಡನ್ನು ಒಂದೇ ಸಂಕೇತವಾಗಿ ಬಳಸಿದ್ದಾರೆ ಈ 'ಭೂತ' ಎನ್ನುವುದು ನಾವು ಹೊರಬಂದರೂ ಸಮಾಜ ನಮ್ಮನ್ನು ಅದರಿಂದ ಹೊರಬರಲು ಬಿಡುವುದಿಲ್ಲ ಎನ್ನುವುದನ್ನು ಸೊಗಸಾಗಿ ನಿರೂಪಿಸಿದ್ದಾರೆ. ಈ ಎಲ್ಲ ವಿಷಯಗಳನ್ನು ಗಮನಿಸಿದಾಗ ಇವರ ಕಥೆಗಳು ಎಲ್ಲಿಯೂ ಅತಿಯಾದ ಹಿಂಸೆ, ಕ್ರೌರ್ಯ, ದ್ವೇಷಗಳಿಂದ ಕೂಡಿಲ್ಲ. ಕೇವಲ ಗೋಳುಕರೆಯ ಅಳುಬುರುಕ ಕಥೆಯಾಗಿಲ್ಲ. ತಮ್ಮ ತಮ್ಮ ವೈಯಕ್ತಿಕ ಬದುಕನ್ನೇ 'ಪರ್ಸಂಗ'ವೆಂಬಂತೆ ನೋಡುವ, ಆಡುವ ಶಕ್ತಿಯಿಂದಾಗಿ ತಮ್ಮ ಬವಣೆಯಿಂದ ಬಿಡುಗಡೆ ಪಡೆಯುವ ಪಾತ್ರಗಳಾಗಿ ತಮ್ಮ ಜೀವನವನ್ನು, ಜೀವಂತಿಕೆಯನ್ನು ಕಾಯ್ದುಕೊಂಡಿವೆ. ಆದ್ದರಿಂದಲೇ ಜಿ. ಎಚ್. ನಾಯಕ ಅವರು "ರಾಜಶೇಖರ ನೀರಮಾನ್ವಿಯವರ ಕಥೆಗಳು ಅನುಭವಗಳನ್ನು ತಾತ್ವಿಕ ಮತ್ತು ವೈಚಾರಿಕ ಚೌಕಟ್ಟಿನಲ್ಲಿ ನೋಡುವ ಹಂಬಲವುಳ್ಳ ಬರವಣಿಗೆ ಅವರದಾಗಿದೆ" ಎಂದಿದ್ದಾರೆ.[11]

ಇವರ 12 ಕಥೆಗಳಲ್ಲಿಯೂ ಒಂದು ನಿರ್ದಿಷ್ಟ ಕಾಲ ಮತ್ತು ಭೌಗೋಳಿಕ ಪರಿಸರದಲ್ಲಿ ವಿನ್ಯಸ್ತಗೊಂಡಿದ್ದರೂ ಅವುಗಳನ್ನು ದಾಟಿ ವಿಶಾಲವಾದ ಮನಸ್ಥಿತಿ ಮತ್ತು ಸಾಧ್ಯತೆಗಳನ್ನು ಧ್ವನಿಸುವ ಶಕ್ತಿಯನ್ನು ಈ ಕಥಾನಕಗಳು ಪಡೆದುಕೊಂಡಿವೆ. ವಿವರಗಳಲ್ಲಿ ಸ್ಥಳೀಯವಾಗಿದ್ದೂ ಆಶಯದಲ್ಲಿ ವಿಶ್ವಾತ್ಮಕ ನೆಲೆಗಳನ್ನು ಸ್ಪರ್ಶಿಸುತ್ತವೆ. ಇಲ್ಲಿಯ ಕಥೆಗಳು ಒಂದು ಕುಟುಂಬದ ಕಥೆಯಾಗಿ ಪ್ರಾರಂಭವಾಗಿ, ಸಮುದಾಯದ ಕಥನವಾಗಿ ಬೆಳೆದು, ಇಡೀ ಕಲ್ಯಾಣ ಕರ್ನಾಟಕದ ಮತ್ತು ಇಂತಹ ಪ್ರದೇಶದ ಇಂಡಿಯಾದ ಅರ್ಧಶತಮಾನದ ಅನುಭವಕ್ಕೆ ಒಡ್ಡಿದ ರೂಪಕವೆಂಬಂತೆ ನಮ್ಮ ಮುಂದಿವೆ.

ಕಥೆಯಲ್ಲಿ ಬರುವ ಗೌಡ–ಕೂಲಿಹಾಳು, ಹೊಲ, ಪ್ರಾಣಿ–ಪಕ್ಷಿಗಳು ಮತ್ತು ಕೆಲ ಅನೈತಿಕ ಹೆಂಗಸರು, ಹಳ್ಳಿಯ ಮೂಢನಂಬಿಕೆ, ಸಂಪ್ರದಾಯ ಅದಕ್ಕೆ ಜೋತುಬಿದ್ದ ಜನ ಮತ್ತು ಅವುಗಳಿಗೆ ಆಗಾಗ ಪ್ರತಿರೋಧ ತೋರಿಸುವ ಪಾತ್ರಗಳು ಇವೆಲ್ಲವನ್ನೂ ನೋಡಿದಾಗ ಇಡೀ ಕಲ್ಯಾಣ ಕರ್ನಾಟಕದ ಜನ–ಜೀವನ ನಮ್ಮ ಕಣ್ಣಮುಂದೆ ಹಾದುಹೋದಂತಾಗುತ್ತದೆ. ಈ ಭಾಗದ ಕಥೆಗಳನ್ನು ಗಮನಿಸಿದ ಮೊಗಳ್ಳಿ ಗಣೇಶ್ ಹೀಗೆ ಹೇಳುತ್ತಾರೆ. "ಹಳೇ ಮೈಸೂರಿನ ಮೇಧಾವಿ ಕಥೆಗಾರರಾಗಿದ್ದ ಮಾಸ್ತಿಯವರೇ ಇಡೀ ಸಮಾಜವನ್ನು ಪ್ರತಿನಿಧಿಸುವಂತಹ ಕಥೆಗಳನ್ನು ಬರೆಯಲು ಆಗಿರಲಿಲ್ಲ. ಹಾಗಾಗಿಯೇ ಹೈದ್ರಬಾದ ಕರ್ನಾಟಕದ ಅನನ್ಯ ಪ್ರತಿಭೆಗಳೇ ಬರಬೇಕಾಯಿತು" ಎಂದು "ಪ್ರಾತಿನಿಧಿಕ ಸಣ್ಣಕಥೆಗಳು" ಕೃತಿಯ ಸಂಪಾದಕರಾಗಿ ತಮ್ಮ ಪ್ರಸ್ತಾವನೆಯಲ್ಲಿ ಈ ಪ್ರದೇಶದ ಕತೆಗಳ ವೈಶಿಷ್ಟ್ಯವನ್ನು ಗುರುತಿಸುತ್ತಾರೆ. (ನೋಡಿ; ಪ್ರಾತಿನಿಧಿಕ ಸಣ್ಣ ಕಥೆಗಳು, ಬೆಳ್ಳಿಬೆಳಕುಮಾಲೆ, ಪ್ರಸಾರಾಂಗ, ಗು.ವಿ.ಗು. ಪು:2, 2005)[12] ಈ ಮಾತು ರಾಜಶೇಖರ ನೀರಮಾನ್ವಿಯವರಿಗೂ ಅನ್ವಯ.

ನೀರಮಾನ್ವಿಯವರ ಯಾವುದೇ ಕಥೆಯನ್ನು ಓದಿದರೂ ಅದರಲ್ಲಿ ಮನುಷ್ಯನ ಬದುಕು ಮತ್ತು ಸಮಾಜ ಬೇರೆ ಬೇರೆಯಾಗಿ ಕಾಣುವುದೇ ಇಲ್ಲ. ಸಮಾಜ ಮತ್ತು ವ್ಯಕ್ತಿ ಒಂದೇ ನಾಣ್ಯದ ಎರಡು ಮುಖಗಳಂತೆ ಬಿಂಬಿತವಾಗಿವೆ. ಆದ್ದರಿಂದಲೇ ಇವರ ಕಥೆಗಳೆಲ್ಲವೂ ಕಲ್ಯಾಣ ಕರ್ನಾಟಕ ಮತ್ತು ಅದರ ಸುತ್ತಮುತ್ತ ಪ್ರದೇಶಗಳಲ್ಲಿಯೇ ಗಿರಕಿ ಹೊಡೆಯುತ್ತವೆ. ಮತ್ತು ಇವರ ಕಥೆಗಳಲ್ಲಿ ಆ ಭಾಗದ ಹಸಿವು, ಬಡತನ, ಕಾಮ, ಶ್ರೀಮಂತರ ದೌರ್ಜನ್ಯ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಜೀವ ಪಡೆದುಕೊಂಡು ನಮ್ಮ ಕಣ್ಣಮುಂದೆಯೇ ನಡೆಯುತ್ತಿರುವಂತೆ ಭಾಸವಾಗುತ್ತವೆ. ಅಂದರೆ ಇದು ಲೇಖಕರ ಮತ್ತು ಸಮಾಜದ ನಡುವಿನ ಕುರಿತ ಸ್ವಾನುಭವದ ಕಥಾನಕ ಎಂದರೂ ತಪ್ಪಾಗಲಾರದು.

ಲೇಖಕರಿಗೆ ನಗರಪ್ರದೇಶಗಳಲ್ಲಿ ಮಾತ್ರವಲ್ಲ ಗ್ರಾಮೀಣ ಪ್ರದೇಶದಲ್ಲಿಯೂ ಸಡಿಲಗೊಳ್ಳುತ್ತಲೇ ಶಿಥಿಲಗೊಳ್ಳುತ್ತಿರುವ ಸಂಬಂಧಗಳ ಬಗ್ಗೆ ಮತ್ತು ನಾಗರಿಕತೆಯ ಸೊಗಿನ ನಡುವೆ ಅವನತಿಯ ಹಾದಿ ಹಿಡಿಯುತ್ತಿರುವ ಸಂಸ್ಕೃತಿಯ ಬಗ್ಗೆ ಕಳವಳವಿದೆ. ತಲ್ಲಣವಿದೆ. ಇಲ್ಲಿನ ಕಥೆಗಳಲ್ಲಿ ಲೇಖಕರು ಬಡಜನರ ಹಸಿವು ಮತ್ತು ಅಸ್ತವ್ಯಸ್ತ ಜೀವನದ ಬಗ್ಗೆ ತೋರುವ ಕಾಳಜಿ ಮತ್ತು ಅವುಗಳ ಬಗೆಗೆ ಕೊಡುವ ವಿವರಣೆಯನ್ನು ಗಮನಿಸಿದರೆ ಅವರ ತೀವ್ರತರವಾದ ಹಂಬಲ ಸಮಸಮಾಜವನ್ನು ನಿರ್ಮಿಸುವುದೇ ಆಗಿದೆ.

ಒಟ್ಟಾರೆಯಾಗಿ ನೀರಮಾನ್ವಿಯವರು ವಸ್ತು, ಭಾಷೆ, ಮತ್ತು ತಂತ್ರಗಾ–

ರಿಕೆಯನ್ನು ಸಮರ್ಥವಾಗಿ ದುಡಿಸಿಕೊಂಡಿದ್ದಾರೆಂಬುದರಲ್ಲಿ ಯಾವ ಅನುಮಾನವೂ ಇಲ್ಲ. ತಮ್ಮ ಕಥೆಗಳಲ್ಲಿ ಗ್ರಾಮೀಣ ಸೊಗಡನ್ನು ಪಸ–ರಿಸುವಲ್ಲಿ ಬಹುಮುಖ್ಯ ಆಸ್ಥೆಯನ್ನು ತೋರುವವರಂತೆ ಕಾಣಿಸುತ್ತಾರೆ. ಇಲ್ಲಿನ ಪ್ರತಿಯೊಂದು ಕಥೆಗಳೂ ಗ್ರಾಮೀಣ ಪ್ರದೇಶದ ಅನೇಕ ಸಂದರ್ಭಗಳನ್ನು ದೇಸಿ ನುಡಿಯ ಆರ್ದ್ರ ದನಿಗಳಲ್ಲಿ ನಮ್ಮ ಮುಂದಿಡುವ ಪ್ರಯತ್ನ ಮಾಡುತ್ತವೆ. ಈ ಕೃತಿಯಲ್ಲಿ ಬರುವ ಬಹುಪಾಲು ಕುಟುಂಬಗಳು ಕೃಷಿಕ ಕುಟುಂಬಗಳೆ ಆದರೂ ಕೃಷಿ ಕಾಯಕವನ್ನು ಹೊರತುಪಡಿಸಿಯೂ ಕೌಟುಂಬಿಕ ವ್ಯವಸ್ಥೆಯ ವಿವಿಧ ಮಗ್ಗಲುಗಳನ್ನು ಪರಿಚಯಿಸುವ ಮತ್ತು ಜೀವ ಸಂಬಂಧಗಳ ಭಿನ್ನ ಆಯಾಮಗಳ ಕಡೆಗೆ ಬೆಳಕು ಚೆಲ್ಲುವ ಪ್ರಯತ್ನ ಮಾಡುತ್ತವೆ. ಹಾಗಾಗಿ ಈ 'ಸಮಗ್ರ ಕಥೆಗಳು' ಕೃತಿಯ ಎಲ್ಲ ಕಥೆಗಳು ಸಂಪೂರ್ಣ ಗ್ರಾಮೀಣ ಬದುಕಿನ ತಿರುಳಲ್ಲದೆ ಬೇರೇನೂ ಅಲ್ಲ. ಎಷ್ಟೇ ಕಲ್ಪಿತ ಸಂಗತಿಗಳನ್ನು ಒಳಗೊಂಡರೂ ಒಂದಲ್ಲ ಒಂದು ನೆಲೆಯಲ್ಲಿ ಅವು ಗ್ರಾಮೀಣ ಬದುಕನ್ನು ಹೋಲುವಂಥದ್ದೇ ಆಗಿರುತ್ತವೆ. ಇಲ್ಲಿನ ಕಥೆಗಳು ಮನುಷ್ಯನ ಅಂತರಂಗವನ್ನು ತೆರೆದಿಡುತ್ತಲೇ ಅವರ ಬಹುಮುಖೀ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿಯುತ್ತವೆ.

**ಕೊನೆಟಿಪ್ಪಣಿಗಳು:**


1. ಡಾ॥ ಡಿ. ಎಲ್. ನರಸಿಂಹಾಚಾರ್, ಶಿವಕೋಟ್ಯಾಚಾರ್ಯ ವಿರಚಿತ ವಡ್ಡರಾಧಾನೆ (ಸಂ) (2005, 19ನೇ ಮುದ್ರಣ), ಡಿ.ವಿ.ಕೆ. ಪ್ರಕಾಶನ, ಮೈಸೂರು, ಪು.ಸಂ. 33.
2. ಜಿ. ಎಚ್. ನಾಯಕ, ಕನ್ನಡ ಸಣ್ಣಕಥೆಗಳು (ಸಂ) (2018, 10ನೇ ಮುದ್ರಣ), ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ಹೊಸದೇಹಲಿ, ಪ್ರಸ್ತಾವನೆ.
3. ನಾಡೋಜ ಡಾ. ಮನು. ಬಳಿಗಾರ್ (ಪ್ರ. ಸಂ.), ಡಾ. ಬಸವರಾಜ ಸಬರದ (ಸಂ), ಹೈದ್ರಬಾದ ಕರ್ನಾಟಕದ ಆಧುನಿಕ ಸಾಹಿತ್ಯ ಚರಿತ್ರೆ (2018), ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, ಪುಟ–542.
4. ಅದೇ, ಪು.ಸಂ. 543.
5. ಅದೇ, ಪು.ಸಂ. 546.
6. ಅದೇ, ಪು.ಸಂ. 547.
7. ಡಾ. ರಾಜಶೇಖರ ನೀರಮಾನ್ವಿ ಸಮಗ್ರ ಕಥೆಗಳು (2012), ಲೋಹಿಯಾ ಪ್ರಕಾಶನ, ಬಳ್ಳಾರಿ, ಮುನ್ನುಡಿ, ಪು.ಸಂ. 4.
8. ಪ್ರೊ. ಅಲ್ಲಮಪ್ರಭು ಬೆಟ್ಟದೂರ, ಸಹಜ ವಿಮರ್ಶೆ (2011), ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು, ಗುಲ್ಬರ್ಗಾ, ಪು.ಸಂ. 29.
9. ಡಾ. ರಾಜಶೇಖರ ನೀರಮಾನ್ವಿ ಸಮಗ್ರ ಕಥೆಗಳು (2012), ಲೋಹಿಯಾ ಪ್ರಕಾಶನ, ಬಳ್ಳಾರಿ, ಪು.ಸಂ. 38.
10. ನಾಡೋಜ ಡಾ. ಮನು. ಬಳಿಗಾರ್ (ಪ್ರ. ಸಂ.), ಡಾ. ಬಸವರಾಜ ಸಬರದ (ಸಂ), ಹೈದ್ರಬಾದ ಕರ್ನಾಟಕದ ಆಧುನಿಕ ಸಾಹಿತ್ಯ ಚರಿತ್ರೆ (2018), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.ಸಂ. 553.
11. ಜಿ. ಎಚ್. ನಾಯಕ, ಕನ್ನಡ ಸಣ್ಣಕಥೆಗಳು(ಸಂ), ನ್ಯಾಷನಲ್ ಬುಕ್ ಟ್ರಸ್ಟ್ (2018, 10ನೇ ಮುದ್ರಣ), ಇಂಡಿಯಾ, ಹೊಸದೇಹಲಿ, ಪು.ಸಂ. ಥಥುತ
12. ನಾಡೋಜ ಡಾ. ಮನು. ಬಳಿಗಾರ್ (ಪ್ರ. ಸಂ.), ಡಾ. ಬಸವರಾಜ ಸಬರದ (ಸಂ), ಹೈದ್ರಬಾದ ಕರ್ನಾಟಕದ ಆಧುನಿಕ ಸಾಹಿತ್ಯ ಚರಿತ್ರೆ (2018), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.ಸಂ. 548–549.

**ಪರಾಮರ್ಶನ ಗ್ರಂಥಗಳು:**


1. ನಾಡೋಜ ಡಾ. ಮನು. ಬಳಿಗಾರ್ (ಪ್ರ. ಸಂ.), ಡಾ. ಬಸವರಾಜ ಸಬರದ (ಸಂ), ಹೈದ್ರಬಾದ ಕರ್ನಾಟಕದ ಆಧುನಿಕ ಸಾಹಿತ್ಯ ಚರಿತ್ರೆ (2018), ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.
2. ಡಾ. ಜಿ. ಆರ್. ತಿಪ್ಪೇಸ್ವಾಮಿ, ಸಣ್ಣಕಥೆ (2022), ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.
3. ಡಾ. ಹರಿಕೃಷ್ಣ ಭರಣ್ಯ, ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ (2021, 3ನೇ ಮುದ್ರಣ), ಸಪ್ನ ಬುಕ್ ಹೌಸ್, ಬೆಂಗಳೂರು.
4. ಜಿ. ಎಚ್. ನಾಯಕ, ಕನ್ನಡ ಸಣ್ಣಕಥೆಗಳು (ಸಂ) (2018, 10ನೇ ಮುದ್ರಣ), ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ಹೊಸದೇಹಲಿ.
5. ಡಾ॥ ಡಿ. ಎಲ್. ನರಸಿಂಹಾಚಾರ್, 'ಶಿವಕೋಟ್ಯಾಚಾರ್ಯ ವಿರಚಿತ ವಡ್ಡರಾಧಾನೆ'(ಸಂ) (2005, 19ನೇ ಮುದ್ರಣ), ಡಿ.ವಿ.ಕೆ. ಪ್ರಕಾಶನ, ಮೈಸೂರು.
6. ನಾಡೋಜ ಡಾ. ಮನು. ಬಳಿಗಾರ್ (ಪ್ರ. ಸಂ.), ಡಾ. ಪದ್ಮರಾಜ ದಂಡಾವತಿ (ಸಂ), ಕಲ್ಯಾಣ ಕಿರಣ (2021), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
7. ಅಶೋಕ ಟಿ. ಪಿ., ಹೊಸ ಓದು ಮರು ಓದು (2021), ರವೀಂದ್ರ ಪುಸ್ತಕಾಲಯ, ಶಿವಮೊಗ್ಗ.
8. ಪ್ರೊ. ಅಲ್ಲಮಪ್ರಭು ಬೆಟ್ಟದೂರ, ಸಹಜ ವಿಮರ್ಶೆ (2011), ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು, ಗುಲ್ಬರ್ಗಾ.